# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:325

ಸದಸ್ಯರ ಹೆಸರು : ಶ್ರೀ ಶಿವಕುಮಾರ್ ಕೆ.

ಉತ್ತರಿಸುವ ಸಚಿವರು :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ :10.12.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳಲ್ಲೊಂದಾದ ಶಕ್ತಿ ಯೋಜನೆ ಕಾರ್ಯಕ್ರಮ ಜಾರಿಗೆ ಬಂದ ನಂತರ ಎಷ್ಟು ಜನ ಇದರ ಅನುಕೂಲತೆಯನ್ನು ಪಡೆದಿರುತ್ತಾರೆ; ಈ ಕಾರ್ಯಕ್ರಮ ಜಾರಿಗೆ ಬಂದ ನಂತರ ಎಷ್ಟು ಬಸ್‌ಗಳನ್ನು ರಾಜ್ಯ ಸರ್ಕಾರ ಖರೀದಿಸಿದೆ; (ಮಾಹಿತಿ ನೀಡುವುದು) | ಶಕ್ತಿ ಯೋಜನೆ ಜಾರಿಯಾದ ದಿನಾಂಕ:11.06.2023 ರಿಂದ 08.12.2025 ರವರೆಗೆ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಪ್ರಯಾಣಿಸಿರುವ ಫಲಾನುಭವಿಗಳ ಸಂಖ್ಯೆ ವಿವರಗಳು ಕೆಳಕಂಡಂತಿದೆ:- |

| ಸಂಸ್ಥೆ | ಫಲಾನುಭವಿಗಳ ಸಂಖ್ಯೆ (ಕೋಟಿಗಳಲ್ಲಿ) |
|---|---|
| ಕ.ರಾ.ರ.ಸಾ.ನಿಗಮ | 187.84 |
| ಬೆಂ.ಮ.ಸಾ.ಸಂಸ್ಥೆ | 196.93 |
| ವಾ.ಕ.ರ.ಸಾ.ಸಂಸ್ಥೆ | 145.29 |
| ಕ.ಕ.ರ.ಸಾ.ನಿಗಮ | 88.05 |
| **ಒಟ್ಟು** | **618.11** |

ರಾಜ್ಯದ ನಾಲ್ಕು ಸಾರಿಗೆ ನಿಗಮ/ಸಂಸ್ಥೆಗಳಲ್ಲಿ **2023-24 ರಿಂದ 2025-26ರವರೆಗೆ ಖರೀದಿಸಿರುವ/ಖರೀದಿ ಹಂತದಲ್ಲಿರುವ** ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:-

| ಸಂಸ್ಥೆಗಳು | 2023-24 (Jan) | 2024-25 | 2025-26 | ಒಟ್ಟು |
|---|---|---|---|---|
| ಕ.ರಾ.ರ.ಸಾ.ನಿಗಮ | 510 | 698 | 80* | 1288 |
| ಬೆಂ.ಮ.ಸಾ.ಸಂಸ್ಥೆ | 20 ಡೀಸೆಲ್ | 820 ಡೀಸೆಲ್ | - | 2275 |
| | 341 ಇ.ವಿ | 755 ಇ.ವಿ | 339 ಇ.ವಿ | |
| ವಾ.ಕ.ರ.ಸಾ.ಸಂಸ್ಥೆ | 296 | 560 | 311** | 1167 |
| ಕ.ಕ.ರ.ಸಾ.ನಿಗಮ | 720 | 307 | 94 | 1121 |
| **ಒಟ್ಟು** | **1887** | **3140** | **824** | **5851** |

* ಪ್ರಸಕ್ತ 2025-26ನೇ ಸಾಲಿನಲ್ಲಿ **ಕ.ರಾ.ರ.ಸಾ.ನಿಗಮದ** ವತಿಯಿಂದ **70 ನಾನ್ ಎ.ಸಿ.ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು**, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | **ಪ್ರಸಕ್ತ 2025-26ನೇ ಸಾಲಿನಲ್ಲಿ **ವಾ.ಕ.ರ.ಸಾ.ಸಂಸ್ಥೆಗೆ** ಹಂಚಿಕೆಯಾಗಿರುವ 300 ಹೊಸ ಬಸ್‌ಗಳ ಟೆಂಡರ್ ಆಹ್ವಾನಿಸಲಾಗಿದ್ದು, ಖರೀದಿ ಆದೇಶ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ. ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು. |
| ಆ. | ಬೇಡಿಕೆಗೆ ಅನುಗುಣವಾಗಿ ಎಷ್ಟು ಚಾಲಕರ ಖಾಯಂ ನೇಮಕಾತಿಯಲ್ಲಿರುತ್ತದೆ; ಹಾಗೂ ಇನ್ನೂ ಖಾಲಿ ಇರುವ ಚಾಲಕರ ಹುದ್ದೆಗಳೆಷ್ಟು; | ನಾಲ್ಕು ಸಾರಿಗೆ ನಿಗಮದಲ್ಲಿ ಅಕ್ಟೋಬರ್-2025ರ ಅಂತ್ಯಕ್ಕೆ ಪ್ರಸ್ತುತ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಹಾಗೂ ಖಾಲಿ ಇರುವ ಚಾಲನ ಸಿಬ್ಬಂದಿಗಳ ವಿವರ ಈ ಕೆಳಗಿನಂತಿರುತ್ತದೆ: |

| ಸಂಸ್ಥೆ | ಮಂಜೂರಾತಿ | ಕಾರ್ಯ ನಿರ್ವಹಣೆ | ಖಾಲಿ ಸ್ಥಾನ |
|---|---|---|---|
| ಕ.ರಾ.ರ.ಸಾ.ನಿಗಮ | 26831 | 25299 | 1532 |
| ಬೆಂ.ಮ.ಸಾ.ಸಂಸ್ಥೆ | 9979 | 9849 | 130 |
| ವಾ.ಕ.ರ.ಸಾ.ಸಂಸ್ಥೆ | 16344 | 15447 | 897 |
| ಕ.ಕ.ರ.ಸಾ.ನಿಗಮ | 15432 | 13488 | 1944 |
| **ಒಟ್ಟು** | **68586** | **64083** | **4503** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ. | ಗುತ್ತಿಗೆ ಆಧಾರದ ಮೇಲೆ ಚಾಲಕರಾಗಿ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದರೆ ಯಾವಾಗ ಖಾಯಂಗೊಳಿಸಲಾಗುವುದು? | **ಕ.ರಾ.ರ.ಸಾ.ನಿಗಮ ಮತ್ತು ಕ.ಕ.ರ.ಸಾ.ನಿಗಮ:-**<br>ಪ್ರಸ್ತುತ, ಹೊರಗುತ್ತಿಗೆ ಆಧಾರದ ಮೇಲೆ ಚಾಲಕರ ಸೇವೆಯನ್ನು ಏಜೆನ್ಸಿಗಳ ಮೂಲಕ ಪಡೆಯುತ್ತಿದ್ದು, ಸದರಿ ಚಾಲಕರ ಸೇವೆಯನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.<br>**ಬೆಂ.ಮ.ಸಾ.ಸಂಸ್ಥೆ ಮತ್ತು ವಾ.ಕ.ರ.ಸಾ.ಸಂಸ್ಥೆ:-**<br>ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಚಾಲಕರು ಕಾರ್ಯ ನಿರ್ವಹಿಸುತ್ತಿಲ್ಲವಾದ್ದರಿಂದ ಖಾಯಂಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಟಿಡಿ 206 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು